## ಕರ್ನಾಟಕ ಸರ್ಕಾರ
## ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ : ಡಿಟಿಇ/02/ಬಿಎಲ್‌ಎಸ್(2)/2022./1317.

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು – 560 001.
ದಿನಾಂಕ: 27.01.2023

### ಸುತ್ತೋಲೆ

–*****–

ವಿಷಯ: ಡಿ.ಸಿ ಬಿಲ್ಲುಗಳನ್ನು ಮೇಲು ಸಹಿ ಮಾಡುವ ಬಗ್ಗೆ.

ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್/ ಜೆಟಿಎಸ್ ಸಂಸ್ಥೆಗಳಿಂದ ಕೇಂದ್ರ ಕಛೇರಿಗೆ ಮೇಲು ಸಹಿಗಾಗಿ ಸ್ವೀಕೃತವಾಗುವ ಹಲವು ಡಿ.ಸಿ ಬಿಲ್ಲುಗಳು ನಿಯಮಾನುಸಾರವಿರದೆ ನ್ಯೂನತೆ/ಲೋಪದೋಷಗಳು/ಅಪೂರ್ಣಮಾಹಿತಿ/ದಾಖಲೆಗಳಿಂದಾಗಿ ಆಕ್ಷೇಪಣೆಯಾಗಿ ಹಿಂದಿರುಗಿಸಲ್ಪಡುತ್ತವೆ. ಇದರಿಂದಾಗಿ ಆರ್ಥಿಕ ವರ್ಷಾಂತ್ಯದಲ್ಲಿ ಅನುದಾನ ವ್ಯಪಗತವಾಗುವ ಸಂಭವವಿರುತ್ತದೆ. ಆದ್ದರಿಂದ ಮೇಲು ರುಜುವಿಗಾಗಿ ಸಲ್ಲಿಸುವ ಸಂದರ್ಭದಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.

1. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ(14) ರಂತೆ ವೆಚ್ಚಕ್ಕೆ ಮಂಜೂರಾತಿ ಇಲ್ಲದೇ ಅನುದಾನ ಸೆಳೆಯತಕ್ಕದ್ದಲ್ಲ. ಪ್ರತಿಯೊಂದು ವೆಚ್ಚಕ್ಕೂ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಆದೇಶವನ್ನು ಬಿಲ್ಲಿನೊಂದಿಗೆ ಲಗತ್ತಿಸುವುದು ಹಾಗೂ ಸದರಿ ಮಂಜೂರಾತಿ ಆದೇಶದಲ್ಲಿ ಲೆಕ್ಕ–ಶೀರ್ಷಿಕೆ, ಸರಬರಾಜುದಾರರ ಹೆಸರು, ಉದ್ದೇಶ, ಹಾಗೂ ವೆಚ್ಚದ ವಿವರಗಳನ್ನು ಕಡ್ಡಾಯವಾಗಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
2. ಮಂಜೂರಾತಿ ಆದೇಶಗಳನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 03ಟಿ ಎಎಫ್ ಪಿ 2018 ದಿ: 14.05.2018 ರಲ್ಲಿ ಪ್ರದತ್ತವಾದ ವಿತ್ತಾಧಿಕಾರದನ್ವಯ ಮಾತ್ರ ಚಲಾಯಿಸಿ ಹೊರಡಿಸಬೇಕು. ವಿತ್ತಾಧಿಕಾರವನ್ನು ಮೀರಿದ ವೆಚ್ಚಗಳಿಗೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಮಂಜೂರಾತಿ ಆದೇಶ ಪಡೆದು ಬಿಲ್ಲಿನೊಂದಿಗೆ ಲಗತ್ತಿಸುವುದು.
3. ಸಾದಿಲ್ವಾರು ವೆಚ್ಚ ಕೈಪಿಡಿ–1958 ನಿಯಮಗಳ ನಿಯಮ55(49) ರಂತೆ ರೂ. 10,000/- ವರಗೆ ಸರಕು ಮತ್ತು ಸಾಮಗ್ರಿಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಿಕಟ್ಟೆ ಬೆಲೆಗಳಿಗೆ ಅನುಸಾರವಾಗಿ ಖರೀದಿಸಲು ಅವಕಾಶ ಕಲ್ಪಿಸಿದೆ. ರೂ. 10,000 ಮೇಲ್ಪಟ್ಟ ಖರೀದಿಗಳಿಗೆ ಕೆ.ಟಿ.ಪಿ.ಪಿ ನಿಯಮಗಳನ್ವಯ ಕ್ರಮವಹಿಸಿ ಪೂರಕ ದಾಖಲೆಗಳನ್ನು ಬಿಲ್ಲುಗಳೊಂದಿಗೆ ಲಗತ್ತಿಸಿ ಮೇಲು ಸಹಿಗೆ ಸಲ್ಲಿಸಬೇಕು.

4. ಸರಬರಾಜುದಾರರು/ಸೇವಾ ಸಂಸ್ಥೆಗಳು ಸಲ್ಲಿಸುವ ಬಿಲ್/ಇನ್‌ವಾಯ್ಸ್‌ಗಳು ಕ್ರಮಬದ್ಧವಾಗಿರಬೇಕು. ಪ್ರೋಪರ್ಮಾ ಇನ್‌ವಾಯ್ಸ್ ನೆರಳಚ್ಚು ಪ್ರತಿಗಳನ್ನು ಅಂಗೀಕರಿಸತಕ್ಕದ್ದಲ್ಲ ಮುಂದುವರೆದು, ಸದರಿ ಇನ್ ವಾಯ್ಸ್‌ಗಳಲ್ಲಿ ಖರೀದಿಸಿದ ಸಾಮಾಗ್ರಿಗಳ ದರ, ಪರಿಮಾಣ ಮತ್ತು ಒಟ್ಟುದರಗಳನ್ನು ಕಡ್ಡಾಯವಾಗಿ ನಮೂದಿಸಬೇಕು ಹಾಗೂ ಸೇವಾ ದೃಢೀಕರಣ & ದಾಸ್ತಾನು ದೃಢೀಕರಣಗಳನ್ನು ನಮೂದಿಸಿ ಕಛೇರಿ ಮುಖ್ಯಸ್ಥರಿಂದ ದೃಢೀಕರಿಸಿರಬೇಕು.
5. ಬಿಲ್ಲುಗಳ ಅನುಬಂಧ-ಎ ರಲ್ಲಿ ನಿಯಮಾನುಸಾರ ಅರ್ಹ ಫಲಾನುಭವಿಗಳಿಗೆ ಹಣ ಸಂದಾಯವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
6. ಟಿ.ಡಿ.ಎಸ್ ಇ-ಫೈಲಿಂಗ್ ಬಿಲ್ಲುಗಳಿಗೆ ಸಂಬಂಧಿಸಿದಂತೆ, Form-16 ಸೃಜನೆ ಮತ್ತು ವಿತರಣೆಯು ಬಟವಾಡೆ ಅಧಿಕಾರಿಗಳ ಕರ್ತವ್ಯವಾಗಿದ್ದು, ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸತಕ್ಕದ್ದು.
7. ಡಿಸಿ ಬಿಲ್ಲುಗಳ ಮೇಲು ಸಹಿಗೆ ಸಂಬಂಧಿಸಿದಂತೆ, ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮಗಳು-1958, ಕರ್ನಾಟಕ ಆರ್ಥಿಕ ಸಂಹಿತೆ, ಕೆ.ಟಿ.ಪಿ.ಪಿ ನಿಯಮಗಳು ಹಾಗೂ ಕಾಲಕಾಲಕ್ಕೆ ಸರ್ಕಾರ/ಇಲಾಖೆಯು ಹೊರಡಿಸುವ ಆದೇಶ/ಸುತ್ತೋಲೆಗಳನ್ವಯ ನಿಯಾನುಸಾರ ಪರಿಶೀಲಿಸಿ ಅದರಲ್ಲಿನ ಷರತ್ತು/ನಿಬಂಧನೆಗಳಿಗೆ ಒಳಪಟ್ಟು ಬಿಲ್ಲುಗಳನ್ನು ನಿಗಧಿತ ಅವಧಿಯಲ್ಲಿ ಅಗತ್ಯ ದಾಖಲೆ/ಮಾಹಿತಿಗಳೊಂದಿಗೆ ಮೇಲು ಸಹಿಗಾಗಿ ಸಲ್ಲಿಸತಕ್ಕದ್ದು, ಡಿಸಿ ಬಿಲ್ಲುಗಳು ಅಗತ್ಯ ಮಾಹಿತಿ/ದಾಖಲೆ ಕೊರತೆಯಿಂದಾಗಿ ಆಕ್ಷೇಪಣೆಯಾಗಿ ಹಿಂದಿರುಗಿಸಲ್ಪಟ್ಟಾಗ, ಇದರಿಂದಾಗಿ ಆರ್ಥಿಕ ವರ್ಷಾಂತ್ಯದಲ್ಲಿ ಅನುದಾನ ವ್ಯಪಗತವಾದಲ್ಲಿ ಇದ್ದಕ್ಕೆ ಸಂಬಂಧಿಸಿದ ಪ್ರಾಚಾರ್ಯರು/ಬಟಾವಡೆ ಅಧಿಕಾರಿಗಳನ್ನೆ ನೇರ ಹೊಣೆಗಾರಾಗಿರುತ್ತಾರೆ. ಮುಂದುವರೆದು, ವರ್ಷಾಂತಕ್ಕೆ ಕಾಯದೇ ಬಿಲ್ಲುಗಳನ್ನು ಆದಷ್ಟೂ ಬೇಗನೆ ಈ ಕಛೇರಿಗೆ ಮೇಲು ಸಹಿಗೆ ಸಲ್ಲಿಸಲು ಸೂಚಿಸಿದೆ.
8. ಈಗಾಗಲೇ ಐಡಿಪಿ (Institutional development plan) ಯೋಜನೆಯಡಿ 2022-23 ನೇ ಸಾಲಿಗೆ ಸರಕು/ಸಾಮಾಗ್ರಿಗಳನ್ನು ಖರೀದಿಸಲು ಅನುಮೋದನೆ ಪಡೆದ ನಂತರ ಪುನಃ ಸಾದಿಲ್ವಾರು ವೆಚ್ಚಗಳಡಿ ಭರಿಸದಂತೆ ಸಂಬಂಧಪಟ್ಟ ಪ್ರಾಂಶುಪಾಲರು/ಬಟಾವಡೆ ಅಧಿಕಾರಿಗಳಿಗೆ ಸೂಚಿಸಿದೆ..

(Double payments to be strictly avoided)

**ಲೆಕ್ಕಾಧಿಕಾರಿಗಳು(ಬಿಲ್ಸ್)**
**ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ:

1. ಎಲ್ಲಾ ಸರ್ಕಾರಿ ಇಂಜಿನಿಯರಿಂಗ್/ಪಾಲಿಟೆಕ್ನಿಕ್/ಜೆಟಿಎಸ್ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ( ಮುಂದಿನ ಕ್ರಮಕ್ಕಾಗಿ)
2. ನೋಡಲ್ ಅಧಿಕಾರಿಗಳು, ಹೆಚ್.ಆರ್.ಎಂ.ಎಸ್. ವಿಭಾಗ (ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು)

ಪ್ರತಿ:

1. ಆಡಳಿತಾಧಿಕಾರಿಗಳು/ಬಟಾವಡೆ ಅಧಿಕಾರಿಗಳು (ಮಾಹಿತಿಗಾಗಿ)
2. ಡಿ.ವಿ.ಪಿ ವಿಭಾಗ (ಮಾಹಿತಿಗಾಗಿ)
3. ಕಡತಕ್ಕೆ